ಇ) ಹೌದು

ಈ) ರಾಜ್ಯದಲ್ಲಿ ಸರ್ಕಾರದ 10 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಹಿಂದುಳಿದ ವರ್ಗಗಳಿಗೆ ತೆರೆಯಲ್ಲು ಈ ವರ್ಷದಲ್ಲಿ ಪ್ರಸ್ತಾಪಿಸಿದೆ. ಈ ಬಗ್ಗೆ ಎಲ್ಲಿ ತೆರೆಯಬೇಕೆಂಬುದರ ಬಗ್ಗೆ ಸ್ಥಳ ಗುರುತಿಸಲಾಗುತ್ತಿದೆ. ಸ್ಥಳ ಗುರುತಿಸಿದ ಕೂಡಲೇ ಈ ಬಗ್ಗೆ ಆದೇಶ ಹೊರಡಿಸಲಾಗುವುದು.

452(653)ಶ್ರೀ ಬಿ.ಸಿ.ಪಾಟೀಲ್(ಹಿರೇಕೆರೂರು) ಮಾನ್ಯ ಬೃಹತ್, ಮಧ್ಯಮ ಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಸೌಲಭ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

1) ಹಿರೇಕೆರೂರು ತಾಲ್ಲೂಕಿನಲ್ಲಿ ಸಣ್ಣ ಹಾಗೂ ದೊಡ್ಡ ಕೈಗಾರಿಕಾ ಅಭಿವೃದ್ಧಿಗಾಗಿ ಸರ್ಕಾರವು ಇಲ್ಲಿಯವರೆಗೂ ತೆಗೆದುಕೂಂಡ ಕ್ರಮವನು?

2) ತಾಲ್ಲೂಕಿನಲ್ಲಿ ಹೊಸದಾಗಿ ಕೈಗಾರಿಕಾ ಕೇಂದ್ರಗಳನ್ನು ತೆರೆಯಲ್ಲು ಇರುವ ತೊಂದರೆಯೇನು?

3) ಈ ವಿಷಯದಲ್ಲಿ ಸರ್ಕಾರದ ನಿಲುವೇನು?

ಶ್ರೀ ಪಿ. ಜಿ. ಆರ್. ಸಿಂಧ್ಯ (ಬೃಹತ್, ಮಧ್ಯಮ ಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಸೌಲಭ್ಯ ಸಚಿವರು) :

1) 2001–06ರ ಕೈಗಾರಿಕಾ ನೀತಿಯಲ್ಲಿ ಹಿರೇಕೆರೂರು ತಾಲ್ಲೂಕನ್ನು 'ಸಿ ವಲಯದಲ್ಲಿ ವರ್ಗೀಕರಿಸಲಾಗಿದೆ. ಇದರಡಿಯಲ್ಲಿ ಅತಿ ಸಣ್ಣ ಕೈಗಾರಿಕೆಗಳಿಗೆ ಶೇಕಡಾ 20ರಂತೆ ಗರಿಷ್ಟ ರೂ.10.00 ಲಕ್ಷಗಳವರೆಗೆ ಸಹಾಯ ಧನ ಲಭ್ಯವಿರುತ್ತದೆ.

ಅತಿ ಸಣ್ಣ, ಸಣ್ಣ ಮತ್ತು ದೊಡ್ಡ ಕೈಗಾರಿಕೆಗಳಿಗೆ ಪ್ರವೇಶ ತೆರಿಗೆ ವಿನಾಯಿತಿಯು ಅನುಷ್ಟಾನದ ಅವಧಿಯಲ್ಲಿ ಮತ್ತು ಉತ್ಪಾದನಾ ಅವಧಿಯಲ್ಲಿ ಗರಿಷ್ಟ 3 ಮತ್ತು 5 ವರ್ಷದವರೆಗೆ ಲಭ್ಯವಿರುತ್ತದೆ.

2) ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸಿನ ಮೇರೆಗೆ ಸರ್ಕಾರವು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯನ್ನು ಪುನರ್ ರಚಿಸಿ ಹೊರಡಿಸಲಾದ ಆದೇಶ ಸಂಖ್ಯೆ:ಸಿಐ 169 ಐಸಿಎಸ್ 2003, ದಿನಾಂಕ 27–10–2003 ಮತ್ತು ದಿನಾಂಕ: 30–04–2004 ರಲ್ಲಿ ರಾಜ್ಯದಲ್ಲಿನ 175 ತಾಲ್ಲೂಕು ಕೈಗಾರಿಕಾ ಕೇಂದ್ರಗಳನ್ನು ರದ್ದುಪಡಿಸಿದೆ. ಸದರಿ ಕೇಂದ್ರಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

3)ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

453(654) ಶ್ರೀ ಪಾಟೀಲ್ ಬಿ.ಸಿ.(ಹಿರೇಕೆರೂರು) ಮಾನು ರೇಷ್ಮೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ಸುಮಾರು 8–10 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ರೇಷ್ಮೆ ಫಾರಂನ ಪ್ರಗತಿಯನ್ನು ಸರ್ಕಾರ ಗಮನಿಸಿದೆಯೇ?

ಆ) ಸರ್ಕಾರಕ್ಕೆ ಹೊರೆಯಾಗುವ ಈ ಫಾರಂನ್ನು ಅಭಿವೃದ್ಧಿ ಅಥವಾ ರದ್ದುಪಡಿಸಲು ತೆಗೆದುಕೂಂಡ ಕ್ರಮವೇನು?

ಇ) ಈ ಫಾರಂನ್ನು ಮೂಲ ಇಲಾಖೆಯಾದ ಕಂದಾಯ ಇಲಾಖೆಗೆ ಬಿಟ್ಟು ಕೂಡಲು ತೆಗೆದುಕೊಂಡ ಕ್ರಮವೇನು?

ಶ್ರೀ ಸಿ. ಚೆನ್ನಪ್ಪ (ರೇಷ್ಮೆ ಸಚಿವರು)

ಅ) ಹೌದು

ಆ) ಈ ಕ್ಷೇತ್ರವನ್ನು ಕಾರಣ ಸಂಪೂರ್ಣವಾಗಿ ಕಂದಾಯ ಇಲಾಖೆಗೆ ಹಿಂತಿರುಗಿಸಲು ಚಿಂತನೆ ನಡೆದಿದೆ.

ಇ) ಜಮೀನನ್ನು ಕಂದಾಯ ಇಲಾಖೆಗೆ ಮರಳಿಸಲು ರೇಷ್ಮೆ ಇಲಾಖೆಯಿಂದ ಸಲ್ಲಿಸಲಾದ ಪ್ರಸ್ತಾವನೆಯು ಸರ್ಕಾರದ ಪರಿದಸಶೀಲನೆಯಲ್ಲಿದೆ.

454(915) ಶ್ರೀ ಪಾಟೀಲ್ ಬಿ.ಆರ್(ಆಳಂದ್) ಮಾನ್ಯ ಸಕ್ಕರೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೇಂದ್ರ ಸರ್ಕಾರವು ಈ ವರ್ಷ ನಿಗದಿಮಾಡಿರುವ ಕಬ್ಬಿನ ಕನಿಷ್ಟ ಬೆಲೆಯು ಕಳೆದ ವರ್ಷಕ್ಕಿಂತ ಕಡಿಮೆ ಆಗಿದೆಯೇ?

ಆ) ಸರ್ಕಾರವು ರೈತರ ಹಿತ ರಕ್ಷಿಸಲು ರಾಜ್ಯ ಮಟ್ಟದ ಸಲಹಾ ಬೆಲೆಯನ್ನು ಪ್ರತಿ ಕಾರ್ಖಾನೆಗೂ ಸೂಚಿಸಿದೆಯೇ?

ಇ) ಹಾಗಿಲ್ಲದಿದ್ದಲಿ ಕಾರಣವೇನು?

ಶ್ರೀ ಅಮರೇಗೌಡ. ಎಲ್. ಪಾಟೀಲ್ ಬಯ್ಯಾಪುರ (ಸಕ್ಕರೆ ಸಚಿವರು) :

ಅ) ಕಡಿಮೆಯಾಗಿಲ್ಲ, ಕಳೆದ ವರ್ಷಕ್ಕಿಂತ ರೂ. 15/- ಹೆಚ್ಚಾಗಿದೆ.

ಆ) ಇಲ್ಲ

ಇ) 1994ರವರೆಗೆ ರಾಜ್ಯ ಸರ್ಕಾರವು ಸಲಹಾ ಬೆಲೆಯನ್ನು ಪ್ರತಿ ಕಾರ್ಖಾನೆಗೂ ಸೂಚಿಸಿ ಆದೇಶ ಹೂರಡಿಸುತ್ತಿತ್ತು. ಕೆಲವು ಖಾಸಗಿ ಕಾಖಾನೆಗಳು ಈ ವಿಷಯದ ಮೇಲೆ ನ್ಯಾಯಾಲಯಕ್ಕೆ ಹೋದ ಪ್ರಯುಕ್ತ ಮಾನ್ಯ ನ್ಯಾಯಾಲಯವು ಖಾಸಗಿ ಕಾರ್ಖಾನೆಗಳ ಮನವಿಯನ್ನು ಪುರಸ್ಕರಿಸಿ ರಾಜ್ಯ ಸರ್ಕಾರಕ್ಕೆ ಸಲಹಾ ಬೆಲೆಯನ್ನು ನಿಗದಿಪಡಿಸುವ ಅದಿಕಾರವಿಲ್ಲವೇಂದು ಆದೇಶಿಸಿದ ಪ್ರಯುಕ್ತ ಅಲ್ಲಿಂದೀಚೆಗೆ ರಾಜ್ಯ ಸರ್ಕಾರವು ಸಲಹಾ ಬೆಲೆಯನ್ನು ನಿಗದಿಪಡಿಸುತ್ತಿಲ್ಲ.

456(1135) ಶ್ರೀ ಪಾಟೀಲ್ ಡಿ.ಆರ್(ಗದಗ್) ಮಾನ್ಯ ಭಾರಿ, ಮಾಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸರ್ಕಾರ ಅದಿಕಾರಕ್ಕೆ ಬಂದಾಗ ಸಣ್ಣ ಕೈಗಾರಿಕೆಗಳಿಗೆ ಕೂಡ ಬೇಕಾಗಿರುವ ಬಾಕಿ ಸಬ್ಸಿಡಿ ಹಣವಷ್ಟು(ಜಿಲ್ಲಾವಾರು ವಿವರ ನೀಡುವುದು);

ಆ) ಅದರಲ್ಲಿ ಈಗ ಬಿಡುಗಡೆಯಾಗಿರುವ ಹಣವೆಷ್ಟು (ಜಿಲ್ಲೆವಾರು ವಿವರ ನೀಡುವುದು)

ಇ) ಉಳಿದ ಬಾಕಿ ಹಣವನ್ನು ಬಿಡುಗಡೆ ಮಾಡಲು ಸರ್ಕಾರ ತೆಗೆದುಕೂಂಡಿರುವ ಕ್ರಮವನ್ನು; ಕಾಲಮಿತಿ ಎಷ್ಟು?